ಕರ್ನಾಟಕ ಸರ್ಕಾರ

**ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು-560001**

ದಿನಾಂಕ: 02.06.2018

## : :ಪತ್ರಿಕಾ ಪ್ರಕಟಣೆ: :

2018-19 ನೇ ಸಾಲಿನಲ್ಲಿ ಉಚಿತ ಮತ್ತು ಕಡ್ಡಾಯ ಶಿಕ್ಷಣಕ್ಕಾಗಿ ಮಕ್ಕಳ ಹಕ್ಕು ಕಾಯಿದೆ-2009 ರ ಸೆಕ್ಷನ್ 12(1)(ಸಿ) ಮತ್ತು 12(1)(ಬಿ) ರ ಪ್ರಕಾರ (Right to Education Act-2009) ದಿನಾಂಕ 02.06.2018 ರಂದು ಮೂರನೇ ಸುತ್ತಿನ ಲಾಟರಿಯನ್ನು ನಡೆಸಲಾಗಿದೆ.

- 3ನೇ ಸುತ್ತಿನಲ್ಲಿ 46279 ಸೀಟುಗಳು ಲಭ್ಯವಿದ್ದು, 108794 ಅರ್ಜಿಗಳನ್ನು ಲಾಟರಿ ಪ್ರಕ್ರಿಯೆಗೆ ಪರಿಗಣಿಸಲಾಗಿದೆ. ಈ ಪೈಕಿ 19123 ಸೀಟುಗಳನ್ನು ಹಂಚಿಕೆ ಮಾಡಲಾಗಿದೆ. ಸಂಬಂಧಿಸಿದ ಪೋಷಕರು / ಪಾಲಕರು ದಿನಾಂಕ:08.06.2018.ರೊಳಗಾಗಿ ಸಂಬಂಧಿಸಿದ ಶಾಲೆಗಳಲ್ಲಿ ದಾಖಲಾತಿ ಪಡೆದುಕೊಳ್ಳುವುದು. ನಿಗಧಿಪಡಿಸಿದ ದಿನಾಂಕದೊಳಗೆ ದಾಖಲಾತಿ ಮಾಡಿಕೊಳ್ಳದಿದ್ದಲ್ಲಿ ಸೀಟುಗಳು ತಂತಾನೆ ರದ್ದಾಗುವುದು.

- 2018-19 ನೇ ಸಾಲಿನಲ್ಲಿ ಅನುದಾನಿತ ಮತ್ತು ಅನುದಾನ ರಹಿತ ಒಟ್ಟು 14107. ಶಾಲೆಗಳಲ್ಲಿ 1521117 ಸೀಟುಗಳಿಗೆ ಅರ್ಜಿ ಆಹ್ವಾನಿಸಲಾಗಿತ್ತು. ಒಟ್ಟು 238724 ಅರ್ಜಿಗಳನ್ನು ಸ್ವೀಕರಿಸಲಾಗಿತ್ತು. ದಿನಾಂಕ:20-04-2018ರಂದು ನಡೆದ ಮೊದಲ ಸುತ್ತಿನ ಲಾಟರಿಯಲ್ಲಿ 1,11,548 ಸೀಟುಗಳನ್ನು ಹಂಚಿಕೆ ಮಾಡಲಾಗಿತ್ತು. 40,569 ಸೀಟುಗಳಿಗೆ ಪೋಷಕರು ಆದ್ಯತೆ ನೀಡದ ಕಾರಣ ಹಂಚಿಕೆ ಮಾಡಲಾಗಿರುವುದಿಲ್ಲ.

- ಮೊದಲ ಸುತ್ತಿನಲ್ಲಿ 97,768 ವಿದ್ಯಾರ್ಥಿಗಳು ದಾಖಲಾತಿಯಾಗಿರುತ್ತಾರೆ. ಹಂಚಿಕೆಯಾದ ಶಾಲೆಗಳಿಗೆ ಮಕ್ಕಳ ಪೋಷಕರು ದಾಖಲಿಸಲು ಆಸಕ್ತಿ ತೋರದೆ ಇರುವುದರಿಂದ 13,780 ಸೀಟುಗಳಿಗೆ ದಾಖಲಾತಿಯಾಗಿರುವುದಿಲ್ಲ.

- ದಿನಾಂಕ:24-04-2018 ರಂದು ನಡೆದ ಎರಡನೇ ಸುತ್ತಿನ ಲಾಟರಿಯಲ್ಲಿ 12954 ಸೀಟುಗಳನ್ನು ಹಂಚಿಕೆ ಮಾಡಲಾಗಿತ್ತು. 7652 ಮಕ್ಕಳು ದಾಖಲಾಗಿರುತ್ತಾರೆ. ಹಂಚಿಕೆಯಾದ ಶಾಲೆಗಳಿಗೆ ಮಕ್ಕಳ ಪೋಷಕರು ದಾಖಲಿಸಲು ಆಸಕ್ತಿ ತೋರದೆ ಇರುವುದರಿಂದ 5302 ಸೀಟುಗಳಿಗೆ ದಾಖಲಾತಿಯಾಗಿರುವುದಿಲ್ಲ.
- 3245 ಶಾಲೆಗಳಿಗೆ ಯಾರೂ ಅರ್ಜಿ ಸಲ್ಲಿಸದೇ ಇರುವುದರಿಂದ ಇಂತಹ ಶಾಲೆಗಳಲ್ಲಿ 18208 ಆರ.ಟಿ.ಇ. ಸೀಟುಗಳು ಖಾಲಿ ಇರುತ್ತವೆ.
- 1171 ಶಾಲೆಗಳಿಗೆ ಆರ್.ಟಿ.ಇ ಸೀಟುಗಳಿಗಿಂತ ಕಡಿಮೆ ಅರ್ಜಿ ಸಲ್ಲಿಸಿರುವುದರಿಂದ 8948 ಸೀಟುಗಳು ಖಾಲಿ ಇರುತ್ತವೆ.
- ಒಟ್ಟು 27156 ಸೀಟುಗಳು ಯಾರು ಅರ್ಜಿ ಸಲ್ಲಿಸದ (ಪೋಷಕರು ಇಚ್ಚಿಸದ) ಕಾರಣ ಹಂಚಿಕೆಯಾಗದೇ ಖಾಲಿ ಉಳಿದಿರುತ್ತವೆ.

ನಿರ್ದೇಶಕರು (ಪ್ರಾಥಮಿಕ ಶಿಕ್ಷಣ)